AA

# 2005

## KANNADA

## (Compulsory)

*Time : 3 Hours ]* *[ Maximum Marks : 150*

### INSTRUCTIONS

*(1) Candidates should attempt **all** parts and **all** questions.*

*(2) The number of marks carried by each question is indicated with the question.*

*(3) Answers must be written in Kannada, unless otherwise directed.*

*(4) In the case of Q. No. 1 of Part B, marks will be deducted if the precis is much longer or shorter than the prescribed length.*

*(5) Q. No. 1 of Part B should be answered in the Precis Sheet provided.*

*(6) Please do **not** affix your signatures or reveal your identity while answering the questions on letter writing.*

www.shikarat.com

***ವಿಶೇಷ ಸೂಚನೆ :*** *ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

[Turn over

## ಭಾಗ ಎ

**1.** ಕೆಳಗಿನ ಯಾವುದಾದರೂ **ಒಂದರ** ಬಗ್ಗೆ ಸುಮಾರು 300 ಶಬ್ದಗಳಲ್ಲಿ ಪ್ರಬಂಧ ಬರೆಯಿರಿ : *25*

(ಅ) ರಾಷ್ಟ್ರೀಯ ಭಾವೈಕ್ಯ

(ಆ) ಮಹಿಳಾ ಮೀಸಲಾತಿ

(ಇ) ಬಾಲಕಾರ್ಮಿಕರ ಸಮಸ್ಯೆ

(ಈ) ನನ್ನ ಮೆಚ್ಚಿನ ಪುಸ್ತಕ

(ಉ) ಪರಿಸರ ಮಾಲಿನ್ಯ

(ಊ) ದೇಶದ ಪ್ರಗತಿ ಮತ್ತು ಕೃಷಿಕ

**2.** ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಸಾಧ್ಯವಾದಷ್ಟು ನಿಮ್ಮ ಮಾತುಗಳಲ್ಲಿಯೇ ಉತ್ತರಿಸಿ : *25*

ಕನ್ನಡ ಕವಿಗಳೂ ಸಂತರೂ ಮನುಷ್ಯವರ್ಗದ ಸಮಾನತೆಯನ್ನೂ ಮನುಷ್ಯ-ಮನುಷ್ಯರ ಮಧ್ಯೆ ಇರಬೇಕಾದ ಪರಸ್ಪರ ಸೌಹಾರ್ದ ಸ್ನೇಹ ಬಾಂಧವ್ಯಗುಣಗಳನ್ನೂ ತಮ್ಮ ಕೃತಿಗಳಲ್ಲಿ ಹಾಡಿ ಹೊಗಳಿದ್ದಾರೆ. ತಮ್ಮ ಬದುಕಿನಲ್ಲಿ ಬಾಳಿ ತೋರಿಸಿಕೊಟ್ಟಿದ್ದಾರೆ. ಕವಿರಾಜಮಾರ್ಗದಲ್ಲಿ ಒಂದು ಬಹುದೊಡ್ಡ ಮಾತು ಇದೆ : “ಕಸವರಂ ಎಂಬುದು ನೆರೆ ಸೈರಿಸಲ್ ಆರ್ಪೊಡೆ ಪರವಿಚಾರಮುಮಂ ಪರಧರ್ಮಮುಮಂ”. ಅನ್ಯರ ವಿಚಾರಗಳನ್ನೂ ಅನ್ಯರ ಧರ್ಮವನ್ನೂ ಸಹನೆಯಿಂದ ನೋಡುವುದೇ ನಿಜವಾದ ಐಶ್ವರ್ಯ. ಕನ್ನಡದ ಈಗಿನ ಮೊದಲ ಉಪಲಬ್ಧ ಕೃತಿಯಲ್ಲಿ ಕಂಡುಬರುವ ಈ ಮಾತುಗಳು ಕರ್ನಾಟಕ ಸಂಸ್ಕೃತಿಯು ಇಟ್ಟುಕೊಂಡಿದ್ದ ಮೇಲ್ಪಂಕ್ತಿಯ ಆದರ್ಶವೂ ಆಗಿದೆ. ಇದು ಕನ್ನಡ ಸಂಸ್ಕೃತಿಯ ಸಮನ್ವಯ ಗುಣ. ನೃಪತುಂಗ (ಅಥವಾ ಶ್ರೀವಿಜಯ) ಕನ್ನಡ ಜನರನ್ನು ವರ್ಣಿಸುವಾಗ ಅವರು “ಸುಭಟರೂ, ಕವಿಗಳೂ, ಚಲುವರೂ, ಗುಣಿಗಳೂ, ಅಭಿಮಾನಿಗಳೂ, ಅತ್ಯುಗ್ರರೂ, ಗಂಭೀರಚಿತ್ತರೂ, ವಿವೇಕಿಗಳೂ” ಆಗಿದ್ದರೆಂದು ಹೇಳುತ್ತಾನೆ. ಈ ಮಾತುಗಳು ಸ್ವಾಭಿಮಾನ ಮತ್ತು ಸಮದೃಷ್ಟಿಯು ಅವರ ಪ್ರಮುಖ ಲಕ್ಷಣವಾಗಿದ್ದುವೆಂಬುದನ್ನು ಹೇಳುತ್ತವೆ. “ಮನುಷ್ಯ ಜಾತಿ ತಾನೊಂದೆ ವಲಂ” ಎಂಬುದು ಆದಿಕವಿ ಪಂಪನ ಮಾತು. ಅದೇ ಪಂಪನ ಪ್ರಕಾರ ತ್ಯಾಗ, ಭೋಗ, ಗೇಯ (ಸಂಗೀತ), ಗೋಷ್ಠಿ, ವಿದ್ಯೆಗಳಿಂದ ಹದಗೊಂಡ ಬಾಳನ್ನು ಬಾಳುವವನೇ ನಿಜವಾದ ಮನುಷ್ಯ. ಯುದ್ಧದಲ್ಲಿ ಶೌರ್ಯವನ್ನು ತೋರಬೇಕು; ತನ್ನ ಬಳಿ ಇರುವ ಐಶ್ವರ್ಯವನ್ನು ಬಡವರಿಗೆ ದಾನ ಮಾಡಬೇಕು. ಈ ಶೌರ್ಯ, ತ್ಯಾಗ ಗುಣಗಳನ್ನು ಅವನು ತನ್ನ ಕೃತಿಯಲ್ಲಿ ಎತ್ತಿ ಹಿಡಿದಿದ್ದಾನೆ. “ದೇವನೊಬ್ಬ, ನಾಮ ಹಲವು” ಎಂದು ಬಸವಣ್ಣ ಸಾರಿದರು. ಸುಳ್ಳು ಹೇಳುವವನು ನಿಜವಾದ ಹೊಲೆಯನೇ ಹೊರತು ಹುಟ್ಟಿನಿಂದ ಹೊಲೆತನ ಬರುವುದಿಲ್ಲ ಎಂದು ರಾಘವಾಂಕ ಕವಿ ಸಾರಿದರೆ, ಹರಿಹರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚೋಳ ಚಕ್ರವರ್ತಿಯು ಹೊಲೆಯ ಶಿವಭಕ್ತ ಮಾದಾರ ಚೆನ್ನಯ್ಯನ ಪಾದಗಳಿಗೆ ಎರಗುವಂತೆ ಮಾಡಿದ. ಮನುಷ್ಯವರ್ಗವೆಲ್ಲ ಒಂದು ಎಂಬ

www.shikarat.com

ತತ್ತ್ವವನ್ನು ತಮ್ಮ ತಮ್ಮ ಧರ್ಮದ ಚೌಕಟ್ಟಿನಲ್ಲೇ ಕನ್ನಡ ಜನ ಕಂಡಿದ್ದಾರೆ. ಕನಕದಾಸರು ತಮ್ಮ ರಾಮಧಾನ್ಯ ಚರಿತ್ರೆಯಲ್ಲಿ ಬತ್ತ - ರಾಗಿ ಇವುಗಳ ಸಂಘರ್ಷವನ್ನು ಚಿತ್ರಿಸಿದ್ದಾರೆ. ಅಂತ್ಯದಲ್ಲಿ ಬಡಜನರ ಆಹಾರವಾದ ರಾಗಿ, ಶ್ರೀಮಂತರ ಹಾಗೂ ಉನ್ನತ ಕುಲದವರ ಆಹಾರವಾದ ಬತ್ತಕ್ಕಿಂತ ಶ್ರೇಷ್ಠ ಎಂಬ ಪ್ರಶಸ್ತಿಯನ್ನು ಶ್ರಿರಾಮನಿಂದ ಕೊಡಿಸಿದ್ದಾರೆ. ಬತ್ತಕ್ಕಿಂತ ರಾಗಿ ಶ್ರೇಷ್ಠವೆಂಬ ಈ ಕತೆ ಸಾಂಕೇತಿಕವೆಂದು ಯಾರು ಬೇಕಾದರೂ ಗುರುತಿಸಬಹುದು. ದಯೆಯೇ ಧರ್ಮದ ಮೂಲವೆಂದು ಬಸವಣ್ಣ ಹೇಳಿದರೆ, ಹೊಲೆಯ ಊರ ಹೊರಗಲ್ಲ, ಒಳಗೂ ಇರಲು ಸಾಧ್ಯವೆಂದು ಪುರಂದರದಾಸರು ಪ್ರತಿಪಾದಿಸಿ ಸುಳ್ಳು ಹೇಳುವವ ಹೊಲೆಯ, ದಾರಿಗೆ ಮುಳ್ಳು ಹಚ್ಚುವವ ಹೊಲೆಯ, ಇತ್ಯಾದಿ ಮಾತುಗಳ ಮೂಲಕ ಹೊಲೆತನಕ್ಕೆ ಬೇರೊಂದು ವ್ಯಾಖ್ಯಾನವನ್ನು ಕೊಟ್ಟರು.

*ಪ್ರಶ್ನೆಗಳು :*

(ಅ) ಕನ್ನಡ ಕವಿಗಳೂ ಸಂತರೂ ತಮ್ಮ ಕೃತಿಗಳಲ್ಲಿ ಏನನ್ನು ಹಾಡಿ ಹೊಗಳಿದ್ದಾರೆ ?

(ಆ) ಕನ್ನಡ ಸಂಸ್ಕೃತಿಯಲ್ಲಿ ಕಾಣಿಸುವ ಸಮನ್ವಯ ಗುಣ ಯಾವುದು ?

(ಇ) ಆದಿಕವಿ ಪಂಪ ತನ್ನ ಕೃತಿಯಲ್ಲಿ ಎತ್ತಿ ಹಿಡಿದಿರುವ ಆದರ್ಶಗಳು ಯಾವುವು ?

(ಈ) ಕನಕದಾಸರು ತಮ್ಮ 'ರಾಮಧಾನ್ಯ *ಚರಿತ್ರೆ*' ಯಲ್ಲಿ ಯಾವ ಆದರ್ಶವನ್ನು ಸಾಂಕೇತಿಕವಾಗಿ ಹೇಳಿದ್ದಾರೆ ?

(ಉ) ಪುರಂದರದಾಸರು ಹೊಲೆತನಕ್ಕೆ ನೀಡಿದ ಹೊಸ ವ್ಯಾಖ್ಯಾನ ಏನು ?

www.shikarat.com

[Turn over

## ಭಾಗ ಬಿ

1. ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. 25

**ವಿ.ಸೂ. :** *ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.*

ಕುಟುಂಬದ ಶಾಂತಿಯನ್ನು ಕಾಪಾಡುವುದರಲ್ಲಿ ಮಹಿಳೆಯದೇ ಮೇಲುಗೈ. ಸಹನೆ, ತಾಳ್ಮೆ, ಮಾನವೀಯ ಅನುಕಂಪ, ಎಲ್ಲರೊಡನೆ ಹೊಂದಿಕೊಂಡು ನಡೆಯುವ ಗುಣ, ಕುಂದಿಲ್ಲದ ಗೃಹಸ್ಥ ಜೀವನ ಕ್ರಮ, ನೆರೆಹೊರೆಯಲ್ಲಿ ವಿಶ್ವಾಸದ ನಡವಳಿಕೆ, ದಾನ-ಧರ್ಮ, ಇತ್ಯಾದಿ ಕುಟುಂಬ ಶಾಂತಿಗೆ ಬೇಕಾದ ಪ್ರಮುಖ ಗುಣಗಳು. ಉತ್ತಮ ಸಂಸ್ಕಾರದಿಂದ ಬಂದ ಈ ಗುಣಗಳ ಬಲದಿಂದಲೇ ಅನಕ್ಷರಸ್ಥ ಮಹಿಳೆಯರೂ ಕೌಟುಂಬಿಕ ಸುಖ-ಶಾಂತಿಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಹಾಗಾದರೆ ಮಹಿಳೆಯರಿಗೆ ಶಿಕ್ಷಣವೇ ಬೇಕಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬರುವುದು ಸರಿಯಲ್ಲ. ಒಳ್ಳೆಯ ಸಂಸ್ಕಾರವುಳ್ಳ ಗುಣವಂತೆಯಾದ ಮಹಿಳೆಗೂ ವಿದ್ಯೆ ಬೇಕು. ಇನ್ನೂ ಹೆಚ್ಚಿನ ಶಕ್ತಿಯನ್ನೂ ಕಾರ್ಯಕ್ಷಮತೆಯನ್ನೂ ವಿದ್ಯೆ ತಂದುಕೊಡುತ್ತದೆ. ಅಲ್ಲದೆ 'ಒಬ್ಬ ಮಹಿಳೆಯನ್ನು ವಿದ್ಯಾವಂತಳನ್ನಾಗಿ ಮಾಡಿದರೆ ಇಡೀ ಕುಟುಂಬವೇ ವಿದ್ಯಾವಂತವಾಗುತ್ತದೆ' ಎನ್ನುತ್ತಿದ್ದರು ಗಾಂಧೀಜಿ. ಏಕೆ ?

ಕಾರಣ ಇಷ್ಟೇ. ಅಕ್ಷರಜ್ಞಾನವಿಲ್ಲದ ಮಹಿಳೆಗೆ ಹೊರಜಗತ್ತಿನ ತಿಳಿವಳಿಕೆ ದೊರೆಯದೆ ವಿಶಾಲ ಮನೋಭಾವ ಬೆಳೆಯದೆ, ಸಂಕುಚಿತ ದೃಷ್ಟಿ, ಕೀಳರಿಮೆ, ಬಲಹೀನತೆಗಳುಂಟಾಗುತ್ತವೆ. ಅಸಾಮಾನ್ಯ ಪ್ರತಿಭೆಯಿದ್ದರೂ ತನ್ನ ಶಕ್ತಿ ಸಾಮರ್ಥ್ಯಗಳ ಅರಿವಿಲ್ಲದೆ ಕುಟುಂಬದ ಕತ್ತಲೆ ನಿವಾರಿಸಲು ಹೋಗದೆ ಅಸಹಾಯಕಳಾಗಿ ಕುಳಿತುಕೊಳ್ಳುತ್ತಾಳೆ. ವೈದ್ಯಕೀಯ ವಿಜ್ಞಾನ ಮುಂದುವರಿದ ಈ ದಿನಗಳಲ್ಲಿ ಅದರ ಪ್ರಯೋಜನ ಪಡೆಯದೆ ಮೂಢ ನಂಬಿಕೆಗೆ ಬಲಿಯಾಗಿ ತಿಳಿಯದೆಯೇ ಸಮಾಜದ ರೋಗಗ್ರಸ್ತ ಸ್ಥಿತಿಗೆ ಕಾರಣಳಾಗುತ್ತಾಳೆ. ಆರ್ಥಿಕ ಮುಗ್ಗಟ್ಟಿನಲ್ಲಿ, ಅಸಹಾಯಕ ಸ್ಥಿತಿಯಲ್ಲಿ ಜೀವನವನ್ನು ಸಾಗಿಸುವುದೇ ಅವಳಿಗೆ ಸಮಸ್ಯೆಯಾಗುತ್ತದೆ. ಎದುರಿಸುವ ಧೈರ್ಯವಿಲ್ಲ. ನಿವಾರಿಸುವ ಶಕ್ತಿಯಿಲ್ಲ. ಮೂಕವಾಗಿ ಸಂಕಟವನ್ನು ಅನುಭವಿಸಬೇಕಾಗುತ್ತದೆ.

ಮಹಿಳೆ ವಿದ್ಯಾವಂತಳಾದರೆ, ಸ್ವಾವಲಂಬನೆಯ ಮಾರ್ಗ ಅರಿತರೆ, ಆರ್ಥಿಕ ತಿಳಿವಳಿಕೆ ಪಡೆದರೆ ಅವಳ ದೃಷ್ಟಿ ವಿಶಾಲವಾಗುತ್ತದೆ. ಸಂಕುಚಿತ ಬುದ್ಧಿ ತೊಲಗಿ ವಿಮರ್ಶಾತ್ಮಕ ದೃಷ್ಟಿ ಬೆಳೆದು, ಸ್ವಸಾಮರ್ಥ್ಯದಿಂದ ಜನಾಂಗವನ್ನು ಉನ್ನತ ಹಾದಿಯಲ್ಲಿ ನಡೆಸಲು ಸಹಾಯವಾಗುತ್ತದೆ. ವೈಜ್ಞಾನಿಕ ಕ್ರಮದಲ್ಲಿ ಮಕ್ಕಳ ಪಾಲನೆ, ಆಹಾರದ ಮಹತ್ವ, ಆರೋಗ್ಯ, ನೈರ್ಮಲ್ಯ, ಶುಚಿತ್ವ, ಕುಟುಂಬ ಯೋಜನೆ ಮುಂತಾದ ವಿಚಾರಗಳಲ್ಲಿ ಒಳ್ಳೆಯ ತಿಳಿವಳಿಕೆ ಇರುತ್ತದೆ. ಸಾಮಾಜಿಕ ಸಮಸ್ಯೆಗಳಿಗೆ ಯುಕ್ತ ಪರಿಹಾರದ ಅನ್ವೇಷಣೆ, ಭ್ರಷ್ಟಾಚಾರಗಳನ್ನು ಎದುರಿಸುವ ನೈತಿಕ ಧೈರ್ಯ, ಸಮಯ ಮತ್ತು ಕರ್ತವ್ಯ ಪ್ರಜ್ಞೆಯ ಮಹತ್ವ ಅರ್ಥವಾಗಿ ಹೊಸ ದೃಷ್ಟಿಕೋನ ಬೆಳೆಯುತ್ತದೆ. ಇವು ಜನಾಂಗದ ಭವಿಷ್ಯಕ್ಕೆ ಹೊಸ

www.shikarat.com

ಆಶಾಕಿರಣ. ಅದಕ್ಕೆಂದೇ ಕುಟುಂಬದಲ್ಲಿ ಹೆಣ್ಣು ಮಗುವನ್ನು ತಾತ್ಸಾರ ಮಾಡದೆ ಅದರ ಸರ್ವಾಂಗೀಣ ಕಲ್ಯಾಣಕ್ಕೆ ಮೊದಲು ಗಮನ ಹರಿಸಬೇಕು. ಮಹಿಳಾ ಕಲ್ಯಾಣವೇ ಜನಾಂಗದ ಕಲ್ಯಾಣ.

ವಿದ್ಯಾವಂತ ಮಹಿಳೆ ತನ್ನ ಮಕ್ಕಳಿಗೆ ಮಾರ್ಗದರ್ಶಕಳಾಗಬೇಕು. ಅವಳು ನೀಡುವ ಅಥವಾ ಕೊಡಿಸುವ ಶಿಕ್ಷಣದಲ್ಲಿ ಮಕ್ಕಳ ಭವಿಷ್ಯಕ್ಕೆ ಅನುಕೂಲತರವಾಗುವ ಅಂಶಗಳಿರಬೇಕು. ಅವರ ಬೌದ್ಧಿಕ ವಿಕಾಸಕ್ಕೂ ಅಲ್ಲಿ ಮಹತ್ವವಿರಲಿ. ಉತ್ತಮ ಅಭಿರುಚಿಯನ್ನೂ, ಉದಾತ್ತ ಭಾವನೆಗಳನ್ನೂ ಬೆಳಸಲು ಪ್ರಚೋದನೆಯನ್ನು ಕೊಡುವ ಸಂಗೀತ, ಸಾಹಿತ್ಯ, ಚಿತ್ರಕಲೆ, ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳ ಅಭಿವ್ಯಕ್ತಿಯ ಪ್ರತಿಭೆಗೂ, ಪ್ರಗತಿಗೂ ರಾಷ್ಟ್ರದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕೂ ಪೂರಕ. ಇದರೊಂದಿಗೆ ಅವರ ದೈಹಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ಇರಲಿ. ಅಂಗ ಸಾಧನೆ, ವ್ಯಾಯಾಮದಿಂದ ದೇಹದ ಆರೋಗ್ಯ ಶಕ್ತಿಗಳು ಉತ್ತಮವಾಗುವುದಲ್ಲದೆ ಹೆಚ್ಚು ಉತ್ಸಾಹದಿಂದ ಚಟುವಟಿಕೆಯಿಂದ ಕೆಲಸ ಮಾಡಲು ಸಾಧ್ಯ.

**2.** ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ : *25*

Albert Einstein said, "We owe a lot to the Indians, who taught us how to count, without which no worthwhile scientific discovery could have been made". Mark Twain said, "India is the cradle of the human race, the birth place of human speech, the mother of history, the grand-mother of legend, and the great grand-mother of tradition." Our most valuable and most instructive materials in the history of man are treasured up in India only.

The French scholar, Romain Rolland said, 'If there is one place on the face of the earth where all the dreams of living men have found a home from the very earliest days, when man began to dream of existence, it is India.'

Hu Shih, former Ambassador of China to USA said, "India conquered and dominated China culturally for 20 cenuries without ever having to send a single soldier across her borders."

www.shikarat.com

## ಭಾಗ ಸಿ

1. (ಅ) ಕೆಳಗಿನವುಗಳಲ್ಲಿ **ಒಂದನ್ನು** ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ : *10*

    (i) ರಸ್ತೆಯ ದುರವಸ್ಥೆ

    (ii) ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷಾ ಬೋಧನೆ

    (iii) ನಿಮ್ಮ ಊರಿನ ಕುಡಿಯುವ ನೀರಿನ ಅಭಾವ

   (ಆ) ಕೆಳಗಿನವುಗಳಲ್ಲಿ **ಎರಡರ** ಅರ್ಥಸ್ವಾರಸ್ಯವನ್ನು ವಿವರಿಸಿ : *10*

    (i) ಹಾಸಿಗೆ ಇದ್ದಷ್ಟು ಕಾಲು ಚಾಚು.

    (ii) ಮಾತು ಬಲ್ಲವನಿಗೆ ಜಗಳವಿಲ್ಲ.

    (iii) ಅತಿಯಾಸೆ, ಗತಿಗೇಡು.

    (iv) ದಯೆಯೇ ಧರ್ಮದ ಮೂಲ.

   (ಇ) ಕೆಳಗಿನ ನುಡಿಗಟ್ಟುಗಳಲ್ಲಿ **ಎರಡರ** ಅರ್ಥ ವಿವರಿಸಿ, ಅವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : *5*

    (i) ಮನೆಮಾತಾಗು

    (ii) ಕಾಲಮೇಲೆ ನಿಲ್ಲು

    (iii) ಕಿವಿ ಕಚ್ಚು

    (iv) ಮೂಲೆಗುಂಪಾಗು

    (v) ಹೊಟ್ಟೆ ಉರಿ

2. (ಅ) ಕೆಳಗೆ ಬಿಟ್ಟಿರುವ ಖಾಲಿ ಜಾಗವನ್ನು ಭರ್ತಿಮಾಡಿ : *5*

    (i) ಪುರಂದರದಾಸರ ಕೀರ್ತನೆಗಳ ಅಂಕಿತ ..................... .

    (ii) ಶಿವರಾಮ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ................. .

    (iii) 'ಮೈಸೂರು ಹುಲಿ' ಎಂದು ......................... ಅವರನ್ನು ಕರೆಯುತ್ತೇವೆ.

    (iv) ಕರ್ನಾಟಕ ಏಕೀಕರಣಗೊಂಡ ವರ್ಷ ...................... .

    (v) 'ಸಂವಿಧಾನದ ಶಿಲ್ಪಿ' ಎಂದು ................ ಅವರನ್ನು ಕರೆಯುತ್ತೇವೆ.

www.shikarat.com

(ಆ) ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ ರೂಪಗಳನ್ನು ನೀಡಿ : 5

(i) ಗೇಹ

(ii) ಕೀರುತಿ

(iii) ಸಿರಿ

(iv) ಬೇಸಗೆ

(v) ರನ್ನ

(vi) ಮಸಣ

(vii) ಬಗ್ಗ

(viii) ಸೊಗ

(ix) ಗೊಟ್ಟಿ

(x) ಹಕ್ಕಿ

(ಇ) ಕೆಳಗಿನವುಗಳಲ್ಲಿ ಐದಕ್ಕೆ ತದ್ಭವ ರೂಪಗಳನ್ನು ನೀಡಿ : 5

(i) ಮಲ್ಲಿಕಾ

(ii) ವೃಷಭ

(iii) ದ್ಯೂತ

(iv) ಆಶಾ

(v) ಮೃತ್ಯು

(vi) ಶೂನ್ಯ

(vii) ಆರ್ಯ

(viii) ಸ್ನೇಹ

(ix) ಪ್ರತಿಧ್ವನಿ

(x) ಸಂತೋಷ

www.shikarat.com

[Turn over

(ಈ) ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ : *10*

(i) ರನ್ನನ ಗಧಾಯುದ್ದಂ ಕಾವ್ಯದ ಧುರಂತ ನಾಯಕ ಧುರ್ಯೋದನ.

(ii) ನಿಮಗೆ ಯುಗಾಧಿಯ ಹಾರ್ಧಿಕ ಶುಬಾಷಯಗಲು.

(iii) ಕೇಸಿರಾಜನು ಷಬ್ಧಮನಿಧರ್ಪಣಂ ಎಂಬ ಕ್ರತಿಯನ್ನು ರಚಿಸಿದನು.

(iv) ಬಾಗವಥ ದರ್ಮದ ಪ್ರಚಾರ ಧಾಸ ಶಾಹಿತ್ಯದ ಗುರಿ.

(v) ಮುಕ್ಯಾದ್ಯಾಪಖರು ಸಾಲೆಗೆ ಬಂಧರು.

www.shikarat.com